**ದಿನಾಂಕ: 09–06–2011 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಮತ್ತು ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | |
|---|---|---|---|---|
| 1 | ರ.ಆಂಜನಪ್ಪ | ಅಧ್ಯಕ್ಷರು | 1 | ಮುಖ್ಯ ಅಭಿಯಂತರರು |
| 2 | ಗೀತಾ ಶ್ರೀನಿವಾಸರೆಡ್ಡಿ | ಸದಸ್ಯರು | 2 | ಕೌನ್ಸಿಲ್ ಕಾರ್ಯದರ್ಶಿ |
| 3 | ಎನ್.ಶಕುಂತಲ | ಸದಸ್ಯರು | 3 | ಉಪ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ) & (ದಕ್ಷಿಣ) |
| 4 | ಬಿ.ಆರ್.ಚಂದ್ರಶೇಖರ್ | ಸದಸ್ಯರು | 4 | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ) & (ದಕ್ಷಿಣ) |
| 5 | ಆರ್.ಎಸ್.ಸತ್ಯನಾರಾಯಣ್ | ಸದಸ್ಯರು | 5 | ವಲಯ ಅರಣ್ಯಾಧಿಕಾರಿ(ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾಜರಾಜೇಶ್ವರಿನಗರ) |
| 6 | ಎಸ್.ಕೇಶವಮೂರ್ತಿ | ಸದಸ್ಯರು | | |
| 7 | ಅಶ್ವಥ್‌ನಾರಾಯಣ.ಜಿ.ಎ. | ಸದಸ್ಯರು | | ಕಾ.ಪಾ.ಅ.(ಯೋಜನೆ(ಪೂರ್ವ/ಪಶ್ಚಿಮ/ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ ರಾಜರಾಜೇಶ್ವರಿನಗರ) |
| 8 | ಎಸ್.ವಿಜಯನ್ | ಸದಸ್ಯರು | | |
| 9 | ನಿರ್ಮಲ | ಸದಸ್ಯರು | 7 | ಕಾ.ಪಾಅ.–1 & 2(ಯೋಜನೆ–ಕೆರೆಗಳು) |
| 10 | ಎನ್.ಎಂ.ಕೃಷ್ಣಮೂರ್ತಿ | ಸದಸ್ಯರು | | ಎ.ಸಿ.ಎಫ್ (ಕೆರೆಗಳು) |
| 11 | ಹೆಚ್.ಎನ್.ಗಂಗಾಧರ್ | ಸದಸ್ಯರು | | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಮಾನ್ಯ ಆಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಅಧ್ಯಕ್ಷರು ಅರಣ್ಯ ಇಲಾಖೆಯ ಅಧಿಕಾರಿಗಳನ್ನು ಉದ್ದೇಶೀಸಿ ಮಾತನಾಡುತ್ತಾ, ಹಿಂದಿನ ಸಭೆಯಲ್ಲಿ ಕೇಳಿರುವ ವಿವರಗಳಿಗೆ ಮಾಹಿತಿಯನ್ನು ಸಭೆಗೆ ಒದಗಿಸುವಂತೆ ಸೂಚಿಸಿದರು. ಸಮಿತಿಯಿಂದ ಕಳುಹಿಸಿದ ಪತ್ರ ಹಾಗೂ ನಮೂನೆಗಳು ಕಛೇರಿಯಲ್ಲಿ ಸ್ವೀಕೃತವಾಗದೇ ಇರುವುದರಿಂದ, ಮಾಹಿತಿಯನ್ನು ನಾಳೆ ಸಮಿತಿಗೆ ಕಳುಹಿಸಲಾಗುವುದೆಂದು ಅಧಿಕಾರಿಗಳು ಅಧ್ಯಕ್ಷರಲ್ಲಿ ಮನವಿ ಮಾಡಿದರು.

2010–11ನೇ ಸಾಲಿನ ಆಯವ್ಯಯದಲ್ಲಿ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆಗೆ ಕಾಯ್ದಿರಿಸಿರುವ ರೂ.4923.53ಲಕ್ಷಗಳ ಅನುದಾನದಲ್ಲಿ ಎಷ್ಟು ಕಾಮಗಾರಿಗಳನ್ನು ನಿರ್ವಹಿಸಲಾಗಿದೆ, ಎಷ್ಟು ಅನುದಾನ ಖರ್ಚಾಗಿದೆ ಎಂಬುದರ ಬಗ್ಗೆ ವಾರ್ಡ್‌ವಾರು ಮಾಹಿತಿಯನ್ನು ನೀಡುವಂತೆ ಅಧ್ಯಕ್ಷರು ಸೂಚಿಸಿದರು.

2010–11ನೇ ಸಾಲಿನ ಕಾರ್ಯಕ್ರಮ ಪಟ್ಟಿಗೆ ಜಾಬ್‌ಕೋಡ್ ನೀಡಿರುವ ಬಗ್ಗೆ ಮಾಹಿತಿಯನ್ನು ನೀಡುವಂತೆ ಸೂಚಿಸಿ, ಜಾಬ್‌ಕೋಡ್ ನೀಡದಿರುವ ಕಾಮಗಾರಿಗಳ ಮಾಹಿತಿಯನ್ನು ಸಮಿತಿಗೆ ನೀಡಿದಲ್ಲಿ, ಮುಖ್ಯ ಲೆಕ್ಕಾಧಿಕಾರಿಗಳೊಂದಿಗೆ ಚರ್ಚಿಸಿ ಜಾಬ್‌ಕೋಡ್ ನೀಡುವ ಕುರಿತು ಕ್ರಮ ವಹಿಸಲಾಗುವುದೆಂದು ತಿಳಿಸಿದರು.

2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಾಯ್ದಿರಿಸಿಕೊಂಡು ಅಭಿವೃದ್ಧಿಗೊಳಿಸಬೇಕಾಗಿರುವ ಕಾಮಗಾರಿ ವಿವರಗಳ ಬಗ್ಗೆ ಮಾಹಿತಿ ಹಾಗೂ 2011–12ನೇ

ಸಾಲಿನ ಆಯವ್ಯಯದಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲಾಗಿದೆ ಎಂಬುದರ ಬಗ್ಗೆ ಮಾಹಿತಿ ನೀಡಲು ಸೂಚಿಸಿದರು.

**ಶ್ರೀ.ಪುಟ್ಟಸ್ವಾಮಿ, ಉಪ ಅರಣ್ಯ ಸಂರಕ್ಷಣಾಧಿಕಾರಿ**(ದಕ್ಷಿಣ): ಅಧ್ಯಕ್ಷರು ಸೂಚಿಸಿದ ಮಾಹಿತಿಯನ್ನು ನೀಡುತ್ತಾ, ಪರಿಸರ ದಿನಾಚರಣೆ ಅಂಗವಾಗಿ ಪೂರ್ವ ವಲಯಕ್ಕೆ ಎಂಟು ಸಾವಿರ ಗಿಡಗಳನ್ನು ಕಾಮಗಾರಿ ಇಲಾಖೆಗೆ ಕೊಡಲಾಗಿದೆಯೆಂದು ತಿಳಿಸಿದರು. ಅವರು ಆ ಗಿಡಗಳನ್ನು ಯಾವ ಯಾವ ಜಾಗಗಳಲ್ಲಿ ನೆಟ್ಟಿದ್ದಾರೆ, ಅವುಗಳು ಸರಿಯಾದ ರೀತಿಯಲ್ಲಿ ಪೋಷಣೆಯಾಗುತ್ತಿವೆಯೇ ಇಲ್ಲವೇ ಎಂಬ ಬಗ್ಗೆ ತಪಾಸಣೆ ನಡೆಸಲಾಗುವುದೆಂದು, ಒಣಗಿ ಹೋಗಿರುವ ಸಸಿಗಳ ಜಾಗದಲ್ಲಿ ಬೇರೆ ಸಸಿಗಳನ್ನು ನೆಡುವ ಕಾರ್ಯವನ್ನು ಹಮ್ಮಿಕೊಳ್ಳಲಾಗುವುದೆಂದು ತಿಳಿಸಿದರು.

**ಶ್ರೀ.ಕೇಶವಮೂರ್ತಿ, ಸಮಿತಿ ಸದಸ್ಯರು** : ಪಾದಚಾರಿ ರಸ್ತೆ ಬದಿಯಲ್ಲಿ ಚಿಕ್ಕಪುಟ್ಟ ಗಿಡಗಳು, ಹೊಂಗೆ ಗಿಡಗಳು ಹಾಗೂ ಹೂ ಮತ್ತು ಹಣ್ಣಿನ ಗಿಡಗಳನ್ನು ನೆಡಲು ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕೆಂದು, ಇದರಿಂದ ನಗರದಲ್ಲಿರುವ ಪಕ್ಷಿ ಸಂಕುಲಗಳಿಗೆ ಅನುಕೂಲವಾಗುತ್ತದೆಂದು ತಿಳಿಸಿದರು.

**ಶ್ರೀ.ಪುಟ್ಟಸ್ವಾಮಿ, ಉಪ ಅರಣ್ಯ ಸಂರಕ್ಷಣಾಧಿಕಾರಿ(ದಕ್ಷಿಣ) :** ಪಾಲಿಕೆಯಲ್ಲಿ ಗ್ರೀನ್ ಪೋಲ್ಸ್‌ಗೆ (Green garden) ಈ ಸಾಲಿನಲ್ಲಿ ರೂ.8.00 ಲಕ್ಷಗಳ ಅನುದಾನ ಮೀಸಲಿರಿಸಿದೆ. 2011–12ನೇ ಸಾಲಿನ ಆಯವ್ಯಯದಲ್ಲಿ ರೂ.16.00ಲಕ್ಷಗಳನ್ನು ಇದಕ್ಕಾಗಿ ಮೀಸಲಿಡುವಂತೆ ಮನವಿ ಮಾಡಿರುವುದಾಗಿ ತಿಳಿಸಿದರು. ಈ ಕಾರ್ಯಕ್ರಮದ ಉದ್ದೇಶ ಪಾಲಿಕೆ ವ್ಯಾಪ್ತಿಯಲ್ಲಿರುವ ಮರಗಳನ್ನು ತನಿಖೆ ಮಾಡಿ, ಶಿಥಿಲವಾದ ಮರಗಳನ್ನು ಗುರುತಿಸುವುದು, ಒಣಗಿದ ಮರಗಳ ಬಗ್ಗೆ ಮಾಹಿತಿಯನ್ನು ನೀಡುವುದು, ಇನ್ನಿತರೆ ಮರಗಳ ಬಗ್ಗೆ ಮಾಹಿತಿಯನ್ನು ಕಾಲ ಕಾಲಕ್ಕೆ ಮಾಹಿತಿ ನೀಡುವುದು. ಇದರಿಂದ ಮರಗಳ ನಿರ್ವಹಣೆಗೆ ಅನುಕೂಲವಾಗುತ್ತದೆ. ಸದರಿ ಕಾರ್ಯಕ್ಕೆ ಹೆಚ್ಚಿನ ಅನುದಾನವನ್ನು ಮಿಸಲಿರಿಸಲು ಅಧ್ಯಕ್ಷರಲ್ಲಿ ಮನವಿ ಮಾಡಿದರು.

**ಅಧ್ಯಕ್ಷರು** : ಗ್ರೀನ್ ಪೋಲ್ಸ್‌ಗೆ ಸಂಬಂಧಿಸಿದಂತೆ ಕೆಲವು ಮಾರ್ಪಾಡುಗಳನ್ನು ಮಾಡಬೇಕಾಗಿದ್ದು, ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ, ಹೆಚ್ಚಿನ ಅನುದಾನವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೆಂದು, ಸಧ್ಯಕ್ಕೆ ಈ ವಿಷಯವನ್ನು ಮುಂದೂಡುವಂತೆ ಸೂಚಿಸಿದರು.

**ಶ್ರೀಮತಿ.ಶಕುಂತಲಾ, ಪಾಲಿಕೆ ಸದಸ್ಯರು** : ಪಾಲಿಕೆ ವತಿಯಿಂದ ನೆಡುವ ಗಿಡಗಳನ್ನು ನೆಟ್ಟ ನಂತರ, ಅವುಗಳ ನಿರ್ವಹಣೆ ಸರಿಯಾಗಿ ಮಾಡಲಾಗುತ್ತಿದೆಯೇ, ಇಲ್ಲವೇ ಎಂಬುದನ್ನು ಪರಿಶೀಲಿಸಬೇಕು ಮತ್ತು ರಸ್ತೆ ಬದಿಯಲ್ಲಿರುವ ಮರ ಗಿಡಗಳಲ್ಲಿ ಸಣ್ಣ ಸಣ್ಣ ಹುಳು ಹುಪ್ಪಟೆಗಳು ಬರುವುದರಿಂದ, ಸಾರ್ವಜನಿಕರ ಆರೋಗ್ಯದ ಹಿತದೃಷ್ಠಿಯಿಂದ ಪಾಲಿಕೆ ವ್ಯಾಪ್ತಿಯಲ್ಲಿರುವ ಮರಗಳಿಗೆ ಹುಳು ಹುಪ್ಪಟೆ ಬರದಂತೆ ಕಾಲಕಾಲಕ್ಕೆ ಔಷಧಿಯನ್ನು ಸಿಂಪಡಿಸಲು ಸಲಹೆ ನೀಡಿದರು.

**ಶ್ರೀ.ಪುಟ್ಟಸ್ವಾಮಿ, ಉಪ ಅರಣ್ಯ ಸಂರಕ್ಷಣಾಧಿಕಾರಿ**(ದಕ್ಷಿಣ): ವಾಸದ ಮನೆಗಳ ಪಕ್ಕದಲ್ಲಿರುವ ಮರಗಳಿಗೆ ಔಷಧಿ ಸಿಂಪಡಿಸುವಾಗ ಮನೆಯವರಿಗೆ ತೊಂದರೆಯಾಗುತ್ತದೆ. ಆದುದರಿಂದ, ಮುಂಜಾಗ್ರತೆ ಕ್ರಮ ತೆಗೆದುಕೊಂಡು ಮರಗಿಡಗಳಿಗೆ ಬಗ್ಗೆ ರಾತ್ರಿ ವೇಳೆ ಅಥವಾ ಬಿಸಿಲು ಜಾಸ್ತಿ ಇರುವಾಗ ಔಷಧಿ ಸಿಂಪಡಿಸಲಾಗುವುದೆಂದು ತಿಳಿಸಿದರು. ಸದರಿ ಕಾರ್ಯಕ್ಕೆ ಎರಡು ವಾಹನಗಳನ್ನು ಹೊಸದಾಗಿ ತೆಗೆದುಕೊಳ್ಳಬೇಕಾಗಿದ್ದು, ಟಿ & ಎಫ್ ಕಮಿಟಿಯಲ್ಲಿ ಈ ಬಗ್ಗೆ ಮನವಿ ಮಾಡಲಾಗಿದ್ದು, ಒಂದು ವಾಹನವನ್ನು ಖರೀದಿಸಲು ಅನುಮತಿ ನೀಡಿದ್ದಾರೆಂದು ತಿಳಿಸಿದರು.

<u>**ಅಧ್ಯಕ್ಷರು**</u> : ಅರಣ್ಯ ಇಲಾಖೆಯಲ್ಲಿ ಮರ ತೆಗೆಯಲು ಬಳಸುವಂತಹ ಮಿಷನ್‌ಗಳು ಎಷ್ಟಿವೆ, ಅವಶ್ಯಕತೆ ಇರುವ ಮಿಷನ್‌ಗಳೆಷ್ಟು ಎಂಬುದರ ಬಗ್ಗೆ ಮಾಹಿತಿ ನೀಡಲು ತಿಳಿಸಿದರು.

<u>**ಶ್ರೀ.ಪುಟ್ಟಸ್ವಾಮಿ, ಉಪ ಅರಣ್ಯ ಸಂರಕ್ಷಣಾಧಿಕಾರಿ**</u>(ದಕ್ಷಿಣ) ರವರು ಈ ಕುರಿತು ವಲಯವಾರು ಮಾಹಿತಿ ನೀಡುತ್ತಾ, ನಾಲ್ಕು ವಲಯಗಳಲ್ಲಿ ಮಿಷನ್‌ಗಳು ಕೆಲಸ ಮಾಡುತ್ತಿದ್ದು, ಅವಶ್ಯಕತೆಗೆ ಅನುಗುಣವಾಗಿ ತೊಂದರೆ ಇರುವ ಸ್ಥಳಗಳಲ್ಲಿ, ವಲಯದಿಂದ ವಲಯಕ್ಕೆ ಬದಲಾವಣೆ ಮಾಡಿಕೊಳ್ಳುವುದಾಗಿ ತಿಳಿಸಿದರು. ಮಳೆಗಾಲದಲ್ಲಿ ಸಾಕಾಗುವುದಿಲ್ಲ. ಪ್ರೈವೇಟ್‌ನಿಂದಲೂ ಸಹ ತರಿಸಿಕೊಳ್ಳಲಾಗುತ್ತಿದೆಯೆಂದು ತಿಳಿಸಿದರು.

<u>**ಅಧ್ಯಕ್ಷರು**</u> : 2011-12ನೇ ಸಾಲಿನ ಆಯವ್ಯಯದಲ್ಲಿ ಹೆಚ್ಚಿನ ಅನುದಾನವನ್ನು ಕಾಯ್ದಿರಿಸಿಕೊಂಡು, ಸಿದ್ಧಪಡಿಸಿಕೊಂಡಿರುವ ಕಾಮಗಾರಿಗಳ ವಿವರಗಳ ಬಗ್ಗೆ ಮಾಹಿತಿಯನ್ನು ಸಮಿತಿಗೆ ಒದಗಿಸಲು ಸೂಚಿಸಿದರು.

ಜೆ.ಪಿ. ಪಾರ್ಕ್‌ಗೆ ಸಂಬಂಧಪಟ್ಟ ಕಾಮಗಾರಿ ಕಡತವು ಸಮಿತಿಯ ಗಮನಕ್ಕೆ ಬರದೆ ವರ್ಕ್ ಆರ್ಡರ್ ಆಗಿರುವ ಬಗ್ಗೆ ಅಸಮಾಧಾನ ವ್ಯಕ್ತ ಪಡಿಸುತ್ತಾ, ಇನ್ನು ಮುಂದೆ ಈ ರೀತಿ ಆಗದಂತೆ ಎಚ್ಚರಿಕೆ ವಹಿಸುವಂತೆ ತಿಳಿಸುತ್ತಾ, ಸಮಿತಿಗೆ ಸಂಬಂಧಪಟ್ಟ ಯಾವುದೇ ಕಡತಗಳು ನೇರವಾಗಿ ಸಮಿತಿಯ ಮುಂದೆ ಬರಬೇಕೆಂದು ಸೂಚಿಸಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಬಗ್ಗೆ ಹಾಗೂ ಅವುಗಳ ಅಭಿವೃದ್ಧಿಗೆ 2011-12ನೇ ಸಾಲಿನಲ್ಲಿ ಕಾಯ್ದಿರಿಸಿರುವ ರೂ.9872.60ಲಕ್ಷಗಳ ಅನುದಾನದ ಬಗ್ಗೆ ಅಧಿಕಾರಿಗಳೊಂದಿಗೆ ಕೂಲಂಕುಷವಾಗಿ ಚರ್ಚಿಸಿದರು.

<u>**ಶ್ರೀ.ಚಂದ್ರಶೇಖರ್**</u> : ಕೆರೆಗಳ ಅಭಿವೃದ್ಧಿಗೆ ಈ ಸಾಲಿನಲ್ಲಿ 163.00ಕೋಟಿ ಅನುದಾನವನ್ನು ಕಾಯ್ದಿರಿಸಲು ಮನವಿ ಮಾಡಲಾಗಿದೆಯೆಂದು ತಿಳಿಸಿದರು. ಬೆನ್ನಿಗಾನಹಳ್ಳಿ ಕೆರೆ ಒತ್ತುವರಿಯಾಗಿದ್ದು, ಅದನ್ನು ತೆರವುಗೊಳಿಸಬೇಕಾಗಿದೆಯೆಂದು ತಿಳಿಸಿದರು.

**ಅಧ್ಯಕ್ಷರು** : ಸಮಿತಿ ವತಿಯಿಂದ ಬೆನ್ನಿಗಾನಹಳ್ಳಿ ಕೆರೆಯ ತಪಾಸಣೆ ಕಾರ್ಯವನ್ನು ತ್ವರಿತವಾಗಿ ಹಮ್ಮಿಕೊಳ್ಳಲಾಗುವುದೆಂದು, ಒತ್ತುವರಿಯನ್ನು ತೆರವುಗೊಳಿಸಿ ಅಭಿವೃದ್ಧಿಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದೆಂದು ಸೂಚಿಸಿದರು. ಆಯವ್ಯಯದಲ್ಲಿ ಹೊಸ ಕೆರೆಗಳ ಅಭಿವೃದ್ಧಿಗೆ ಅನುದಾನವನ್ನು ಮೀಸಲಿಡಲು ಪ್ರಸ್ತಾವನೆ ಸಲ್ಲಿಸಲು ಸೂಚಿಸಿದರು.

<u>**ಶ್ರೀ.ಸತೀಶ್, ಮುಖ್ಯ ಅಭಿಯಂತರರು**</u> : ಹೊಸ ಕೆರೆಗಳ ಅಭಿವೃದ್ಧಿಗೆ ರೂ.30.00 ಕೋಟಿಗಳನ್ನು ನೀಡಿದ್ದಾರೆಂದು ತಿಳಿಸಿದರು. ಬಿಬಿಎಂಪಿ ಯಿಂದ 34 ಕೆರೆಗಳನ್ನು ಬಿಡಿಎ ರವರಿಗೆ ಹಸ್ತಾಂತರಗೊಳಿಸಿ, ಒಂದೂವರೆ ವರ್ಷಗಳಾದರೂ ಸಹ ಇದುವರೆವಿಗೂ ಯಾವುದೇ ಕೆರೆಗಳನ್ನು ಬಿಡಿಎರವರು ಅಭಿವೃದ್ಧಿಪಡಿಸಿಲ್ಲವೆಂದು, ಕೆರೆಗಳು ಕಲುಷಿತಗೊಂಡು, ಸೊಳ್ಳೆಗಳ ಉತ್ಪತ್ತಿಯಿಂದ ಅನಾರೋಗ್ಯಕ್ಕೆ ದಾರಿ ಮಾಡಿಕೊಡುವಂತಿದೆ ಎಂದು ತಿಳಿಸಿದರು.

**ಅಧ್ಯಕ್ಷರು** : ಪಾಲಿಕೆಯಿಂದ ಬಿಡಿಎಗೆ ಹಸ್ತಾಂತರಗೊಂಡ ಕೆರೆಗಳ ಪಟ್ಟಿಯೊಂದಿಗೆ, ಅಭಿವೃದ್ಧಿಯಾಗದೇ ಇರುವ ಕೆರೆಗಳ ಪಟ್ಟಿಯನ್ನು ನೀಡುವಂತೆ ಸೂಚಿಸಿದರು. ಇನ್ನು ಮುಂದೆ ಯಾವುದೇ ಕಾರಣಕ್ಕೂ ಕೆರೆಗಳನ್ನು ಬಿಡಿಎಗೆ ಹಸ್ತಾಂತರ ಮಾಡಬಾರದೆಂದು, ಹಾಲಿ ಪಾಲಿಕೆ ವತಿಯಲ್ಲಿರುವ ಕೆರೆಗಳನ್ನು ಉಳಿಸಿಕೊಂಡು ಉತ್ತಮವಾಗಿ ಅಭಿವೃದ್ಧಿಪಡಿಸಲು ಅಗತ್ಯ ಕ್ರಮವನ್ನು ಕೈಗೊಳ್ಳಲು ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದೆಂದು ಸೂಚಿಸಿದರು.

**<u>ಶ್ರೀ.ಸತೀಶ್, ಮುಖ್ಯ ಅಭಿಯಂತರರು</u>** : ಡಿಪಿಆರ್ ರೆಡಿ ಮಾಡಲಾಗುತ್ತಿದ್ದು, ಎಸ್ಟಿಮೇಟ್ ಹಾಕಿದರೆ ಟಿ.ವಿ.ಸಿ.ಸಿ.ರವರು ಅಬ್ಜೆಕ್ಷನ್ ಹಾಕುತ್ತಿದ್ದಾರೆ. ಎರಡು ವರ್ಷದಿಂದ ಸರ್ವೆ ಮಾಡುತ್ತಿದ್ದು, re-validation file process ಮಾಡಬೇಡಿ, ಅಗತ್ಯವಿಲ್ಲವೆಂದು ಬರೆದಿದ್ದಾರೆ.

**<u>ಶ್ರೀ.ಸತೀಶ್, ಮುಖ್ಯ ಅಭಿಯಂತರರು</u>** : ಪಾಲಿಕೆ ವ್ಯಾಪ್ತಿಯಲ್ಲಿ 1,500 ರಿಂದ 2000 ಎಕರೆ ಕ್ವಾರಿಫಿಟ್ ಭೂಮಿಯನ್ನು ಬಳಸಿಕೊಳ್ಳಲು ಉದ್ದೇಶಿಸಿದ್ದು, ಈ ಕ್ವಾರಿಫಿಟ್‌ನಲ್ಲಿ ಕಟ್ಟಡದ ಡೆಬ್ರಿಸ್ ಮತ್ತು ಮೋರಿಗಳ ಮತ್ತು ಕೆರೆಗಳ ಸಿಲ್ಟ್‌ನ್ನು ಹಾಕಬಹುದು, ಈ ಕುರಿತು ಸಾರ್ವಜನಿಕವಾಗಿ ಪತ್ರಿಕಾ ಪ್ರಕಟಣೆ ನೀಡಿದಲ್ಲಿ ಅನುಕೂಲವಾಗುತ್ತದೆಂದು, ಇದರಿಂದ ಕಟ್ಟಡದ ತ್ಯಾಜ್ಯವನ್ನು ತಂದು ಸುರಿಯುವ ಲಾರಿ/ಟಿಪ್ಪರ್ ಗಳಿಂದಲೂ ಒಂದು ಲೋಡ್‌ಗೆ ಇಂತಿಷ್ಟು ಹಣವೆಂದು ನಿಗಧಿಪಡಿಸಿದರೆ, ನಿರ್ವಹಣೆಗೆ ಉಪಯೋಗವಾಗುತ್ತದೆಂದು ಸಲಹೆ ನೀಡಿದರು. ಜಾಗದ ಸುತ್ತಲೂ ಪೆನ್ಸಿಂಗ್ ಹಾಕಲು ಹಣ ಬೇಕಾಗುತ್ತಿದ್ದು, ಈ ಬಗ್ಗೆ ಟಿ & ಎಫ್ ಕಮಿಟಿಯಲ್ಲಿ ತಿಳಿಸಲಾಗಿದೆಂದು ತಿಳಿಸಿದರು.

**<u>ಅಧ್ಯಕ್ಷರು</u>** : ಕ್ವಾರಿಫಿಟ್‌ಗಳು ತುಂಬಿದ ನಂತರ, ಅದನ್ನು ಸಮತಟ್ಟು ಮಾಡಿಸಿ, ಆ ಜಾಗದಲ್ಲಿ ಟ್ರೀ ಪಾರ್ಕ್ ಮಾಡಬೇಕೆಂಬ ಆಶಯವನ್ನು ವ್ಯಕ್ತಪಡಿಸಿದರು. ಪಾಲಿಕೆ ವ್ಯಾಪ್ತಿಯಲ್ಲಿ ಬಹಳಷ್ಟು ಮರಗಳನ್ನು ವಿವಿಧ ಕಾರಣಗಳಿಗಾಗಿ ಕಡಿದು ಹಾಕಿದ್ದು, ಇದರಿಂದಾಗಿ ಪಕ್ಷಿಗಳಿಗೆ ನೆಲೆ ಇಲ್ಲದೆ ತೊಂದರೆಯಾಗಿರುವುದರಿಂದ, ಸ್ಥಳಾವಕಾಶವಿರುವ ಜಾಗಗಳಲ್ಲಿ ಟ್ರೀ ಗಾರ್ಡನ್‌ಗಳನ್ನು ಮಾಡಿದಲ್ಲಿ ಪಕ್ಷಿ ಸಂಕುಲಗಳು ಉಳಿಯುವುದಕ್ಕೆ ಅನುಕೂಲವಾಗುತ್ತದೆಂದು ತಿಳಿಸಿದರು. ಬೆಂಗಳೂರು ಗ್ರೀನ್ ಸಿಟಿ, ಏರ್ ಕಂಡೀಷನ್ ಸಿಟಿ ಎಂದು ಹೆಸರುವಾಸಿಯಾಗಿದ್ದು, ಆ ಹೆಸರನ್ನು ಉಳಿಸಿಕೊಂಡು ಹೋಗುವುದಕ್ಕೆ, ಅಭಿವೃದ್ಧಿ ಮತ್ತು ನಿರ್ವಹಣೆ ಕಾರ್ಯಕ್ಕೆ ಹೆಚ್ಚಿನ ಅನುದಾನದ ಅವಶ್ಯಕತೆ ಇದ್ದು, ಎಷ್ಟು ಹಣ ಬೇಕಾಗುತ್ತದೆಂದು, ಎಸ್ಟಿಮೇಟ್ ಕಳುಹಿಸಿದಲ್ಲಿ ಟಿ & ಎಫ್ ಕಮಿಟಿಯಲ್ಲಿ ಚರ್ಚಿಸಲಾಗುವುದೆಂದು ತಿಳಿಸಿದರು.

ಅಧ್ಯಕ್ಷರು, ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

## *1. ಸಂಖ್ಯೆ: ತೋ.ಸ್ಥಾ.ಸ./ 11/2010, ದಿನಾಂಕ: 24-01-2011,*

*ಮಾನ್ಯ ಆಯುಕ್ತರ ಟಿಪ್ಪಣಿ ದಿನಾಂಕ:01-01-2011 ರಂತೆ :*

***ಅ)*** *2010-11ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ಬೋರ್‌ವೆಲ್‌ಗಳು, ಪಂಪ್‌ಸೆಟ್‌ಗಳು ಮತ್ತು ಪೈಪ್‌ಲೈನ್‌ಗಳ ನಿರ್ವಹಣೆಯಡಿ ಚಾಲ್ತಿ ಕಾಮಗಾರಿಗಳಿಗೆ ಹೆಚ್ಚುವರಿ ಅನುದಾನ ಒದಗಿಸುವ ಕುರಿತು.*

***ಆ)*** *2010-11ನೇ ಸಾಲಿನ ಆಯವ್ಯಯ ಅಂದಾಜಿನಲ್ಲಿ ಗುತ್ತಿಗೆ ಆಧಾರದ ಮೇಲೆ ಉದ್ಯಾನವನಗಳ ನಿರ್ವಹಣೆಗೆ ನಿಗಧಿಪಡಿಸಿರುವ ಅನುದಾನವನ್ನು ಮರು ಹೊಂದಾಣಿಕೆ ಮಾಡಿಕೊಡುವ ಕುರಿತು.*

***ನಿರ್ಣಯ : ಸ್ಥಳ ಪರಿಶೀಲನೆಗೆ ಮುಂದೂಡಲಾಗಿದೆ.***

**2. ವಿಷಯ ಸಂಖ್ಯೆ:ತೋ/ಸ್ಥಾ/ಸ/01 /11-12, ದಿನಾಂಕ: 17-05-2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಸೀಗೆಹಳ್ಳಿ ಕೆರೆ ಹಂತ-1 ರ ಸಮಗ್ರ ಅಭಿವೃದ್ಧಿ ಕಾಮಗಾರಿಗೆ ಮುಖ್ಯ ಅಭಿಯಂತರರು(ಪರಿಸರ ಕೋಶ)ರವರು ಸೀಗೆಹಳ್ಳಿ ಕೆರೆ ಹಂತ-1ರ ಸಮಗ್ರ ಅಭಿವೃದ್ಧಿ ಕಾಮಗಾರಿಯ ಅಂದಾಜು ರೂ.290.00ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಯು 2010-11ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2175/73 ಅಡಿಯಲ್ಲಿ ರೂ.290.00 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ.303-11-000011 ನ್ನು ನೀಡಲಾಗಿದೆ.

ಸೀಗೆಹಳ್ಳಿ ಕೆರೆಯ ಅಭಿವೃದ್ಧಿ ಸಲುವಾಗಿ ರೂ.569.00ಲಕ್ಷಗಳಿಗೆ ಸಮಗ್ರ ಯೋಜನಾ ವರದಿಯನ್ನು ಮೆ॥ಐಡೇಸ್ ರವರು ತಯಾರಿಸಿದ್ದು, ಮೊದಲನೇ ಹಂತದಲ್ಲಿ ರೂ.290.00ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ.

ಮೊದಲನೇ ಹಂತದ ಕಾಮಗಾರಿಯಲ್ಲಿ ಕೆರೆಯಲ್ಲಿನ ಹೂಳು ತೆಗೆಯುವುದು. ಏರಿ ಅಭಿವೃದ್ಧಿಪಡಿಸುವುದು. ಪಾದಚಾರಿ ರಸ್ತೆ ನಿರ್ಮಿಸುವುದು. ಇನ್ ಲೆಟ್‌ಗಳ ಅಭಿವೃದ್ಧಿ, ಸಿಲ್ಟ್‌ಟ್ರ್ಯಾಪ್, ವಾಚ್‌ಮೆನ್ ಶೆಡ್ ಮತ್ತು ಶೌಚಾಲಯ ನಿರ್ಮಾಣ ಇತ್ಯಾದಿಗಳನ್ನೊಳಗೊಂಡಂತೆ, ಅಂದಾಜುಪಟ್ಟಿಯಲ್ಲಿ ಅಂಶಗಳನ್ನು ಅಳವಡಿಸಿಕೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.290.00ಲಕ್ಷ (ಎರಡು ನೂರ ತೊಂಭತ್ತು ಲಕ್ಷ ರೂಪಾಯಿಗಳು ಮಾತ್ರ) ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿ, ತೋಟಗಾರಿಕೆ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ:11-05-2011ರ ಟಿಪ್ಪಣಿ.

**<u>ನಿರ್ಣಯ :</u> ಆಯುಕ್ತರ ದಿನಾಂಕ:11-05-2011ರ ಟಿಪ್ಪಣಿಯನ್ನು ಒಪ್ಪಿದೆ.**

**3) ವಿಷಯ ಸಂಖ್ಯೆ:ತೋ/ಸ್ಥಾ/ಸ/02/11-12, ದಿನಾಂಕ: 23-05-2011**

ಕೈಗೊಂಡನಹಳ್ಳಿ ಕೆರೆಯ ಹಂತ-2 ರ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದಂತೆ, ಕೆ.ಪಿ.ಡಬ್ಲ್ಯೂ.ಡಿ. 2010-11ನೇ ಸಾಲಿನ ದರಪಟ್ಟಿ ಆಧಾರದ ಮೇಲೆ ರೂ.450.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ, ಸಂಖ್ಯೆ.**000-11-N-P-O-K-CD-003** ರಂತೆ ಕಾಮಗಾರಿ ಸಂಕೇತವನ್ನು ಪಡೆದು ಟೆಂಡರ್‌ಗಿಟ್ಟ ಮೊತ್ತ ರೂ.369.37ಲಕ್ಷಗಳಿಗೆ ಅನುಮೋದನೆಗೊಂಡ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕಾರ್ಯಪಾಲಕ ಅಭಿಯಂತರರು – 1 ಯೋಜನೆ – 2, ರವರು ಟೆಂಡರ್ ಪ್ರಕಟಣೆ ಸಂಖ್ಯೆ.ಕಾ.ಅ-1/ಪ.ಕೋ(ಕೆರೆಗಳು)/ ಟೆಂಡರ್/ 01/11-12, ದಿನಾಂಕ:13-04-2011 ರಂದು ಪತ್ರಿಕಾ ಪ್ರಕಟಣೆ ನೀಡಲಾಗಿರುತ್ತದೆ. ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಗುತ್ತಿಗೆದಾರರು ಟೆಂಡರ್ ಷೆಡ್ಯೂಲ್ 'ಬಿ' ನಲ್ಲಿ ನಮೂದಿಸಿರುವ ದರಗಳು ಈ ಕೆಳಗಿನಂತಿದೆ.

| ಕ್ರ. ಸಂ | ಗುತ್ತಿಗೆದಾರರ ಹೆಸರು | 2010–11ನೇ ಸಾಲಿನ PWD ದರಸೂಚಿ ಅನ್ವಯ ಅನುಮೋದಿತ ಮೊತ್ತ | ಗುತ್ತಿಗೆದಾರರು ನಮೂದಿಸಿರುವ ಮೊತ್ತ ರೂ. | 2008–09ನೇ ಸಾಲಿನ ಅನುಮೋದಿತ ದರಕ್ಕಿಂತ ಶೇಕಡವಾರು ಹೆಚ್ಚಳ |
|---|---|---|---|---|
| 1. | **ಶ್ರೀ.ಕೆ.ದಾಮೋದರ್** | 3,69,37,003.02 | 3,03,37,025.00 | – 17.87% |
| 2. | **ಶ್ರೀ.ಬಿ.ಅರುಣ್ ಕುಮಾರ್** | 3,69,37,003.02 | 3,35,95,006.20 | – 9.05% |

ಕನಿಷ್ಠ ದರ ನಮೂದಿಸಿ ಸಿಂಧುತ್ವ ಹೊಂದಿದ್ದ ಗುತ್ತಿಗೆದಾರರಾದ ಶ್ರೀ.ಕೆ.ದಾಮೋದರ್‌ರವರು ನಮೂದಿಸಿದ್ದ ದರಗಳು ಅನುಮೋದಿತ 2010–11ನೇ ಸಾಲಿನ ಕೆ.ಪಿ.ಡಬ್ಲ್ಯೂ.ಡಿ ದರಪಟ್ಟಿಗೆ ಹೋಲಿಸಿದಾಗ ಶೇ.17.87% ಕಡಿಮೆ ದರಗಳಾಗಿದ್ದರಿಂದ, ಸದರಿ ಮೊತ್ತವು ಅನುಮೋದನೆಗೊಂಡ ಮೊತ್ತವಾದ ರೂ.3,03,37,025.00 (ಮೂರು ಕೋಟಿ, ಮೂರು ಲಕ್ಷದ ಮೂವತ್ತೇಳು ಸಾವಿರದ ಇಪ್ಪತ್ತೈದು ರೂಪಾಯಿಗಳು ಮಾತ್ರ)ಗಳಿಗೆ ಕಾರ್ಯಪಾಲಕ ಅಭಿಯಂತರರು ಶಿಫಾರಸ್ಸು ಮಾಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತವು ರೂ.3,03,37,025.00 (ಮೂರು ಕೋಟಿಯ ಮೂರು ಲಕ್ಷದ ಮೂವತ್ತೇಳು ಸಾವಿರದ ಇಪ್ಪತ್ತೈದು ರೂಪಾಯಿಗಳು ಮಾತ್ರ) ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ.ಯು.ಡಿ.ಡಿ/355/ಎಮ್.ಎನ್.ಯು/2007(ಪಿ), ದಿನಾಂಕ: 08–05–2009 ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯ ಬಾಕಿ ಇಟ್ಟು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಶಿಫಾರಸ್ಸನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರವು ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಮೇಲಿನ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಕೆ.ದಾಮೋದರ್, 2010–11ನೇ ಸಾಲಿನ ಅನುಮೋದಿತ ದರಪಟ್ಟಿಗಿಂತ ಶೇ.17.87% ಕಡಿಮೆಯಾದ ಮೊತ್ತವು ರೂ.3,03,37,025.00 ( ಮೂರು ಕೋಟಿ ಮೂರು ಲಕ್ಷದ ಮೂವತ್ತೇಳು ಸಾವಿರದ ಇಪ್ಪತ್ತೈದು ರೂಪಾಯಿಗಳು ಮಾತ್ರ)ಗಳ ಟೆಂಡರ್‌ನ್ನು ಅನುಮೋದಿಸಲು ಕೋರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ತೋಟಗಾರಿಕೆ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ:20–05–2011ರ ಟಿಪ್ಪಣಿ.

**<u>ನಿರ್ಣಯ :</u> ಮಾನ್ಯ ಆಯುಕ್ತರ ದಿನಾಂಕ:20–05–2011ರ ಟಿಪ್ಪಣಿಯನ್ನು ಒಪ್ಪಿದೆ.**

**4) ವಿಷಯ ಸಂಖ್ಯೆ:ತೋ/ಸ್ಥಾ/ಸ/03/11–12, ದಿನಾಂಕ: 28–05–2011**

ಶ್ರೀ.ಆರ್.ಅಶೋಕ್, ಮಾನ್ಯ ಸಾರಿಗೆ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಉಸ್ತುವಾರಿ ಸಚಿವರು, ಬೆಂಗಳೂರು ದಕ್ಷಿಣ ರವರ ಆದೇಶದಂತೆ, ಅಟ್ಟೂರು ಕೆರೆಯ ಸಮಗ್ರ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ದಿನಾಂಕ:01–06–2008 ರಂದು ನಡೆದ ಸಭೆಯಲ್ಲಿ ಆದೇಶಿಸಿದ್ದರು. ಅದರಂತೆ, ಅಟ್ಟೂರು ಕೆರೆಯ ತಂತಿ ಬೇಲಿ ಕೆಲಸ ರೂ.53.23ಲಕ್ಷಗಳಿಗೆ ಮತ್ತು ಮೊದಲನೇ ಹಂತದ ಅಭಿವೃದ್ಧಿಗೆ ರೂ.87.19 ಲಕ್ಷಗಳಿಗೆ ಅಂದಾಜು ಪಟ್ಟಿ ತಯಾರಿಸಿ, ಟೆಂಡರ್ ಕರೆದು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ

ಮತ್ತು 2ನೇ ಹಂತದ ಅಭಿವೃದ್ಧಿ ಕಾಮಗಾರಿಗಳಿಗೆ ರೂ.285.00ಲಕ್ಷಗಳಿಗೆ ಅಂದಾಜು ಪಟ್ಟಿ ತಯಾರಿಸಿ, ಟೆಂಡರ್ ಕರೆದು ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಅಟ್ಟೂರು ಕೆರೆಯಲ್ಲಿ ಕೈಗೊಳ್ಳಬೇಕಾದ ಉಳಿಕೆ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಮುಖ್ಯ ಅಭಿಯಂತರರು (ಯೋಜನೆ-2), ಇವರು ತಾಂತ್ರಿಕ ಸಿಬ್ಬಂದಿಯೊಂದಿಗೆ ಸ್ಥಳ ಪರಿಶೀಲನೆ ನಡೆಸಿ, ಉಳಿಕೆ ಕಾಮಗಾರಿಗಳನ್ನು 3ನೇ ಹಂತದಲ್ಲಿ ಅಳವಡಿಸಿ ಅಂದಾಜು ಪಟ್ಟಿಯನ್ನು ತಯಾರಿಸಿ ಮಂಜೂರಾತಿಗೆ ಮಂಡಿಸಲು ಸೂಚಿಸಲಾಯಿತು ಹಾಗೂ ಈ ಕಾಮಗಾರಿಗೆ ಮೆ॥ಎಸ್.ಟಿ.ಇ.ಎಂ. ರವರನ್ನು ಸಮಾಲೋಚಕರನ್ನಾಗಿ ನೇಮಿಸಿಕೊಂಡು ಅವರಿಂದ ಯೋಜನಾ ವರದಿಯನ್ನು ಪಡೆಯಲಾಗಿದೆ ಹಾಗೂ ಈ ಕಾಮಗಾರಿಯ ಅಂದಾಜು ಮೊತ್ತ ರೂ.480.00 ಲಕ್ಷಗಳು ಈ ಕಾಮಗಾರಿಗೆ ಇ-ಪ್ರೊಕ್ಯುರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿ ಟೆಂಡರ್ ವಿವರಗಳು ಈ ಕೆಳಕಂಡಂತಿವೆ :-

| | | |
|---|---|---|
| 1. | ಕಾಮಗಾರಿಯ ಅಂದಾಜು ಮೊತ್ತ | ರೂ.480.00 ಲಕ್ಷಗಳು |
| 2. | ಟೆಂಡರ್ ಮೊತ್ತ | ರೂ.46,123,312.00 ಲಕ್ಷಗಳು |
| 3. | ಲೆಕ್ಕ ಶೀರ್ಷಿಕೆ | 12 – ನಗರ ವ್ಯಾಪ್ತಿ ಅರಣ್ಯೀಕರಣ |
| 4. | ಕಾಮಗಾರಿ ಸಂಕೇತ | 000-10-N-P-P-0-CD-019 |
| 5. | ಟೆಂಡರ್ ವಿಧಾನ | ಇ-ಪ್ರೊಕ್ಯುರ್‌ಮೆಂಟ್ / ಐಟಂವಾರು |
| 6. | ಟೆಂಡರ್ ಅಧಿಸೂಚನೆ ಪ್ರಕಟವಾದ ದಿನಪತ್ರಿಕೆ | ಪ್ರಜಾವಾಣಿ ಮತ್ತು ಟೈಮ್ಸ್ ಆಫ್ ಇಂಡಿಯಾ ದಿನಾಂಕ: 05-08-2010 |
| 7. | ಟೆಂಡರ್ ಅಧಿಸೂಚನೆ ಸಂಖ್ಯೆ | ಮು.ಅ(ಯೋ-2)/ಟೆಂಡರ್/02/2010-11, ದಿನಾಂಕ:31-07-2010 |
| 8. | ಟೆಂಡರ್‌ನಲ್ಲಿ ಭಾಗವಹಿಸಿದ ಅರ್ಹ ಟೆಂಡರ್‌ದಾರರ ಸಂಖ್ಯೆ | 5 |
| 9. | ಕಡಿಮೆ ಮೊತ್ತ ನಮೂದಿಸಿದ ಗುತ್ತಿಗೆದಾರರ ಹೆಸರು ಮತ್ತು ಮೊತ್ತ | ಶ್ರೀ.ಪಿ.ವೆಂಕಟೇಶ್ವರರಾವ್, ಮೆ॥ಅಮೃತ ಕನ್‌ಸ್ಟ್ರಕ್ಷನ್ಸ್ ಪ್ರೈ.ಲಿ. ರೂ.39,106,358/- |
| 10. | ಶೇಕಡವಾರು | 15.21% ಕಡಿಮೆ |

ಶ್ರೀ.ಪಿ.ವೆಂಕಟೇಶ್ವರರಾವ್, ಮೆ॥ಅಮೃತ ಕನ್‌ಸ್ಟ್ರಕ್ಷನ್ಸ್ ಪ್ರೈ.ಲಿ.ರವರು ರೂ.39,106,358.00ಗಳ ಒಟ್ಟು ಮೊತ್ತದ ಕನಿಷ್ಠ ದರವನ್ನು ನಮೂದಿಸಿದ್ದು, ಈ ಮೊತ್ತವು 2010-11ನೇ ಸಾಲಿನ ದರಪಟ್ಟಿಗೆ ಶೇ.15.21% ಕಡಿಮೆ ಇರುತ್ತದೆ.

ಈ ಹಿನ್ನೆಲೆಯಲ್ಲಿ ಗುತ್ತಿಗೆದಾರರಾದ ಶ್ರೀ.ಪಿ.ವೆಂಕಟೇಶ್ವರ ರಾವ್, ಮೆ॥ಅಮೃತ ಕನ್‌ಸ್ಟ್ರಕ್ಷನ್ಸ್ ಪ್ರೈ.ಲಿ.ರವರು ಟೆಂಡರ್ ಮೊತ್ತ ರೂ.39,106,358.00 ಹಾಗೂ ಈ ಮೊತ್ತವು 2010-11ನೇ ಸಾಲಿನ ದರಪಟ್ಟಿಗೆ ಶೇ.15.21 ಕಡಿಮೆ ಮೊತ್ತದ ಟೆಂಡರ್‌ಗೆ ಅನುಮೋದನೆ ಕೋರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ತೋಟಗಾರಿಕೆ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ:09-04-2011ರ ಟಿಪ್ಪಣಿ.

**ನಿರ್ಣಯ : ಮಾನ್ಯ ಆಯುಕ್ತರ ದಿನಾಂಕ:09-04-2011ರ ಟಿಪ್ಪಣಿಯನ್ನು ಒಪ್ಪಿದೆ.**

**5) ವಿಷಯ ಸಂಖ್ಯೆ:ತೋ/ಸ್ಥಾ/ಸ/04/11-12, ದಿನಾಂಕ: 04-06-2011**

ಬೊಮ್ಮನಹಳ್ಳಿ ವಲಯದ ದೊರೆಕೆರೆಯ ಹಂತ-3 ರ ಅಭಿವೃದ್ಧಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು-1, ಪರಿಸರ ಕೋಶ (ಕೆರೆಗಳು) ರವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 03 ಟೆಂಡರ್‌ಗಳು ಸ್ವೀಕೃತವಾಗಿದ್ದು, (ಮೂರು) ಟೆಂಡರ್‌ಗಳು ಸಿಂಧುವಾಗಿರುತ್ತದೆ. ಕಾರ್ಯಪಾಲಕ ಅಬಿಯಂತರರು-1, ಪರಿಸರ ಕೋಶ (ಕೆರೆಗಳು) ರವರು ಕನಿಷ್ಟ ಶ್ರೀ.ಕೆ.ದಾಮೋದರ್, ಗುತ್ತಿಗೆದಾರರ ಟೆಂಡರ್‌ನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.188.55 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2010-11ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಮುಖ್ಯ ಅಭಿಯಂತರರು, ಪರಿಸರ ಕೋಶ(ಕೆರೆಗಳು) ರವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.183.73 ಲಕ್ಷಗಳಾಗಿದ್ದು, ಗುತ್ತಿಗೆದಾರರಾದ ಶ್ರೀ.ಕೆ.ದಾಮೋದರ್ ರವರು ರೂ.1,55,94,539.89 ಗಳ ದರಗಳನ್ನು ನಮೂದಿಸಿ ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ. ಈ ಮೊತ್ತವು ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಶೇಕಡ.15.12% ರಷ್ಟು ಕಡಿಮೆ ದರವಾಗಿರುತ್ತದೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರಿಮಿಯಂ ಸೇರಿ) ರೂ.1,55,94,539.80 (ಒಂದು ನೂರ ಐವತ್ತೈದು ಲಕ್ಷ ತೊಂಭತ್ತು ನಾಲ್ಕು ಸಾವಿರದ, ಐದು ನೂರ ಮೂವತ್ತೊಂಭತ್ತು ರೂಪಾಯಿ ಹಾಗೂ ಎಂಭತ್ತು ಪೈಸೆ ಮಾತ್ರ) ಗಳಾಗಿದ್ದು, ಸರ್ಕಾರಿ ಆದೇಶ ಸಂಖ್ಯೆ.ಯು.ಡಿ.ಡಿ./635/ಎಮ್.ಎನ್.ವೈ/2010, ದಿನಾಂಕ:02-04-2011ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ (ತಿದ್ದುಪಡಿ) ನಿಯಮಗಳು 2011 ರ ನಿಯಮ 6 ರ ತಿದ್ದುಪಡಿಯಂತೆ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ಥಾಯಿ ಸಮಿತಿಯ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಕೆ.ದಾಮೋದರ್ ರವರು ನಮೂದಿಸಿರುವ ದರಗಳನ್ನು 2010-11ನೇ ಸಾಲಿಗೆ ಹೋಲಿಸಿದಾಗ ಶೇಕಡ 15.12% ರಷ್ಟು ಕಡಿಮೆ ದರಗಳು ಅಥವಾ ರೂ.1,55,94,539.80 (ಒಂದು ನೂರ ಐವತ್ತೈದು ಲಕ್ಷ ತೊಂಭತ್ತು ನಾಲ್ಕು ಸಾವಿರದ, ಐದು ನೂರ ಮೂವತ್ತೊಂಭತ್ತು ರೂಪಾಯಿ ಹಾಗೂ ಎಂಭತ್ತು ಪೈಸೆ ಮಾತ್ರ) ಗಳು ಕಂಡು ಬಂದಿದ್ದು, ಸದರಿ ಕಾಮಗಾರಿಯ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ:02-06-2011ರ ಟಿಪ್ಪಣಿ.

**<u>ನಿರ್ಣಯ:-</u> ಮಾನ್ಯ ಆಯುಕ್ತರ ದಿನಾಂಕ:02-06-2011ರ ಟಿಪ್ಪಣಿಯನ್ನು ಒಪ್ಪಿದೆ.**

ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆಗಳು ಮತ್ತು ನ್ಯೂನ್ಯತೆಗಳನ್ನು ಸರಿಪಡಿಸಲು ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸುವಂತೆ ಮಾನ್ಯ ಆಯುಕ್ತರು ಕಾರ್ಯಪ್ರವೃತ್ತರಾಗಬೇಕೆಂದು ಕೋರುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–
ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**<u>ಪ್ರತಿಯನ್ನು:–</u>**

- ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- *ವಿಶೇಷ ಆಯುಕ್ತರು (ಯೋಜನೆ) ರವರ ಗಮನಕ್ಕೆ ತರಲಾಗಿದೆ.*
- ಪ್ರಧಾನ ಅಭಿಯಂತರವರಿಗೆ ಕಳುಹಿಸಿದೆ.
- ಮುಖ್ಯ ಅಭಿಯಂತರರು (ಯೋಜನೆ–1, (ಪರಿಸರ ಕೋಶ)(ಕೆರೆಗಳು) ಮತ್ತು ಸಂಬಂಧಪಟ್ಟ ಕಾ.ಪಾ.ಆ. ರವರಿಗೆ ಕಳುಹಿಸಿದೆ.
- ಮುಖ್ಯ ಲೆಕ್ಕಾಧಿಕಾರಿ ರವರಿಗೆ ಕಳುಹಿದೆ.
- ಉಪ / ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ) ಮತ್ತು (ದಕ್ಷಿಣ) ರವರಿಗೆ ಕಳುಹಿದೆ.
- ವಲಯ ಅರಣ್ಯಾಧಿಕಾರಿಗಳು (ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಿದೆ.
- ಕಛೇರಿ ಪ್ರತಿ